50

ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/71/2014-15 ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| ಶ್ರೀಮತಿ. ದ್ಯಾಮವ್ವ ಗಂಡ ತಿಂದಪ್ಪ<br>ಶ್ರೀ.ಭೀಮಪ್ಪ ತಂದೆ ಲೇಟ್ ತುಂಬಪ್ಪ<br>ಶ್ರೀ.ಈರಪ್ಪ ತಂದೆ ಲೇಟ್ ತುಂಬಪ್ಪ<br>ಭಾಗ್ಯವ್ವ ತಂದೆ ಲೇಟ್ ತುಂಬಪ್ಪ ಹಗರನೂರು ಗ್ರಾಮ | ಶ್ರೀಮತಿ.ಸೀತಾಬಾಯಿ ಗಂಡ ತುಕ್ಯಾನಾಯ್ಕ ವಡ್ಡಿನಹಳ್ಳಿ ಗ್ರಾಮ |

ದಾವಾ ಜಮೀನಿನ ವಿವರ

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಹಗರನೂರು | 277/ಬಿ | 6-33 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನು ಕೆರೇಕಾನಹಳ್ಳಿ ಪಕ್ಕೀರವ್ವ ಗಂಡ ತುಂಬಪ್ಪ ಹಗರನೂರು ಗ್ರಾಮ ರವರ ಹೆಸರಿಗೆ ಪಹಣಿ ಪಟ್ಟಾ ಇದ್ದು, ಸದರಿ ಪಟ್ಟಾದಾರರು ದಿನಾಂಕ 11-12-2002 ರಂದು ಮರಣ ಹೊಂದಿದ್ದು, ಅವರ ಮರಣದ ನಂತರ ಅವರ ವಾರಸದಾರರೆಂದು ವಾದಿಗಳು ದಿನಾಂಕ 04-02-2015 ರಂದು ಪೋತಿವಾರಸ ಪ್ರಕಾರ ತಮ್ಮಗಳ ಹೆಸರಿಗೆ ಜಂಟಿ ಹಕ್ಕು ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಹಗರನೂರು ರವರು ನಮೂನೆ-21ನ್ನು ಜಾರಿಮಾಡಿದಾಗ, ದಿನಾಂಕ 10-03-2015ರಂದು ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿರವರು ಎಂ.ಆರ್.ನಂ: ಹೆಚ್39/2014-15 ದಿನಾಂಕ 11-02-2015 ರಂದು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 16-04-2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಗಳು ತಮ್ಮ ತಾಯಿಯಾದ ಶ್ರೀಮತಿ.ಪಕ್ಕೀರವ್ವ ಗಂಡ ಕಾರೇಕಾನಹಳ್ಳಿ ತುಂಬಪ್ಪ ರವರ ಹೆಸರಿಗೆ ಹಗರಮೂರು ಗ್ರಾಮದ ಸ.ನಂ. 277/ಬಿ ವಿಸ್ತೀರ್ಣ 6-33 ಎಕರೆ ಜಮೀನು ಪಹಣಿ ಪಟ್ಟಾ ಇದ್ದು, ಅವರು ದಿನಾಂಕ 11-12-2002ರಂದು ಮೃತಪಟ್ಟಿರುತ್ತಾರೆ. ಅವರ ತರುವಾಯ ಅವರ ಮಗಳು ಹಾಗೂ ಹನುಮವ್ವನ ಮಕ್ಕಳಾದ ಭೀಮಪ್ಪ, ಈರಪ್ಪ, ಮತ್ತು ಭಾಗ್ಯವ್ವ ಆದ ನಾವುಗಳು ಜಂಟಿ ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತೇವೆ. ಆದರೆ, ಪ್ರತಿವಾದಿಗಳು ಈ ಜಮೀನುಗೆ ಯಾವುದೇ ಹಕ್ಕು ಇರುವುದಿಲ್ಲ. ಅವರು ಸಲ್ಲಿಸಿದ ತಕರಾರಿನಲ್ಲಿ ಸತ್ಯಾಂಶವಿರುವುದಿಲ್ಲ. ಆದ್ದರಿಂದ ಅವರ ಮನವಿಯನ್ನು ತಳ್ಳಿಹಾಕಿ ತಮ್ಮಗಳ ಹೆಸರಿಗೆ ಪೋತಿವಾರಸ ಪ್ರಕಾರ ಜಂಟಿ ಹಕ್ಕು ಬದಲಾವಣೆ ಮಾಡುವಂತೆ ಕೋರಿ ವಾದ ಮಂಡಿಸಿರುತ್ತಾರೆ.

ಪ್ರತಿವಾದಿಗಳು ಈ ವಿವಾದಿತ ಜಮೀನುನನ್ನು ಹಾಲಿ ಪಟ್ಟಾದಾರರಾದ ಶ್ರೀಮತಿ.ಪಕ್ಕೀರವ್ವ ಇವರು ತನ್ನ ಪತಿಯಾದ ಶ್ರೀ.ತುಕ್ಯಾನಾಯಕ್ ರವರಿಗೆ ಮಾರಾಟ ಮಾಡಿರುತ್ತಾರೆ.ಆದರೆ ನೊಂದಣಿ ಮಾಡಿಸಿಕೊಟ್ಟಿರುವುದಿಲ್ಲ.ಆದ್ದರಿಂದ ಅರ್ಜಿದಾರರ ಮಕ್ಕಳು ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಲಾಯಿತು. ತಕರಾರುದಾರರು ಈ ಮೇಲಿನ ದಾವಾ ಜಮೀನು ಶ್ರೀಮತಿ.ಪಕ್ಕೀರವ್ವ ಗಂಡ ತುಂಬಪ್ಪ ರವರು ತನ್ನ ಗಂಡನಿಗೆ ಮಾರಾಟ ಮಾಡಿರುತ್ತಾಳೆ ಎಂದು ತಿಳಿಸಿರುತ್ತಾಳೆ ಆದರೆ ಅದಕ್ಕೆ ಸಂಬಂದಪಟ್ಟಂತೆ ಯಾವುದೇ ಪೂರಕ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ.ಪೋತಿ ವಾರಸು ಪ್ರಕಾರ ಮೃತರ ಹೆಸರನ್ನು ಪಹಣಿಯಲ್ಲಿ ಕಾನೂನಿನ ರೀತ್ಯಾ ಕಡಿಮೆ ಮಾಡಬೇಕಾಗಿರುವುದರಿಂದ ವಾದಿಗಳು ಜಂಟಿವಾರಸು

48

ಪ್ರಕಾರ ತಮ್ಮಗಳ ಹೆಸರಿಗೆ ಹಕ್ಕು ಬದಲಾವಣೆ ಕೋರಿರುವುದು ಸಮಂಜಸವಿರುವುದರಿಂದ ತಕರಾರು ನೀಡಿದ ಹೇಳಿಕೆಯನ್ನು ತಿರಸ್ಕರಿಸಿ, ವಾದಿಗಳ ಹೆಸರಿಗೆ ಜಂಟಿಯಾಗಿ ಪೋತಿವಾರಸ ಪ್ರಕಾರ ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ, ಕಾರಣಗಳಿಂದಾಗಿ ಪ್ರತಿವಾದಿಗಳು ನೀಡಿದ ಆಕ್ಷೇಪಣೆಯನ್ನು ತಿರಸ್ಕರಿಸಿದೆ. ಪೋತಿವಾರಸ ಪ್ರಕಾರ ಹಗರನೂರು ಗ್ರಾಮದ ಸ.ನಂ. 277/ಬಿ ವಿಸ್ತೀರ್ಣ 6–33 ಎಕರೆ ಜಮೀನನ್ನು ವಾದಿಗಳಾದ ಶ್ರೀಮತಿ.ದ್ಯಾಮವ್ವ ಗಂಡ ತಿಂದಪ್ಪ, ಭೀಮಪ್ಪ ತಂದೆ ತುಂಬಪ್ಪ, ಈರಪ್ಪ ತಂದೆ ಲೇಟ್ ತುಂಬಪ್ಪ, ಮತ್ತು ಭಾಗ್ಯವ್ವ ತಂದೆ ತುಂಬಪ್ಪ ರವರ ಹೆಸರಿಗೆ ಜಂಟಿಯಾಗಿ ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಪ್ರತಿವಾದಿಗಳು ಬಾದಿತರಾದಲ್ಲಿ ತಮ್ಮ ಹಕ್ಕು ಮತ್ತು ಹಿತಾಸಕ್ತಿಯನ್ನು ಉನ್ನತ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26–05–2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/16

ತಹಶೀಲ್ದಾರರು
ಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.